# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ಬ್ಯಾಟರಾಯನಪುರ ಉಪ ವಿಭಾಗ, ವಾರ್ಡ್ ನಂ. 06(ಥಣಿಸಂದ್ರ)

## ವಾರ್ಡ್‌ಸಮಿತಿ ಸಭೆ, ದಿನಾಂಕ: 02-07-2022ರ

## ಸಭಾ ನಡುವಳಿ

**ದಿನಾಂಕ: 02-07-2022**ರಂದು ಬೆಳಿಗ್ಗೆ **11.00** ಗಂಟೆಗೆ ವಾರ್ಡ್ ನಂ.06 ಥಣಿಸಂದ್ರ ವಾರ್ಡ್ ಸಮಿತಿಯ ನೋಡಲ್ ಅಧಿಕಾರಿಗಳಾದ **ಶ್ರೀ ಬಿ. ಎಸ್. ಶ್ರೀಧರ್ ಸಹಾಯಕ ಕಾರ್ಯಪಾಲಕ ಅಭಿಯಂತರರು** ರವರ ಅಧ್ಯಕ್ಷತೆಯಲ್ಲಿ ಹೆಗಡೆನಗರ 2ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಬಿ.ಬಿ.ಎಂ.ಪಿ ಸಮುದಾಯ ಭವನದಲ್ಲಿ ನಡೆದ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು.

| ಕ್ರ.ಸಂ | ಸಭೆಗೆ ಹಾಜರಾಗಿರುವ ಅಧಿಕಾರಿಗಳು | ಹುದ್ದೆ |
|---|---|---|
| 1 | ಶ್ರೀ ಬಿ. ಎಸ್. ಶ್ರೀಧರ್ | ನೋಡಲ್ ಅಧಿಕಾರಿಗಳು, ವಾರ್ಡ್ ನಂ 06(ಥಣಿಸಂದ್ರ) ಹಾಗೂ ಸ.ಕಾ.ಅ ಬಿ.ಬಿ.ಎಂ.ಪಿ |
| 2 | ಶ್ರೀ ಸುರೇಶ ದೇವತರಾಜ್ | ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ, ವಾರ್ಡ್ ಸಮಿತಿ, ವಾರ್ಡ್ ನಂ 06(ಥಣಿಸಂದ್ರ) |
| 3 | ಶ್ರೀಮತಿ ಮಂಜುಳ ಎಸ್ | ಪೊಲೀಸ್ ಸಬ್ ಇನ್ಸಪೇಕ್ಟರ್ ಸಂಪಿಗೆಹಳ್ಳಿ ಪೋಲೀಸ್ ಠಾಣೆ |
| 4 | ಶ್ರೀಮತಿ ಡಾ॥ ಅಲೀನಾ ಜನ್ನತ | ಆರೋಗ್ಯ ವೈಧ್ಯಾಧಿಕಾರಿಗಳು, ಪ್ರಾಥಮಿಕ್ ಆರೋಗ್ಯ ಕೇಂದ್ರ, ಥಣಿಸಂದ್ರ |
| 5 | ಶ್ರೀ ಲಿಂಗರಾಜ | ಎ.ಎಸ್.ಐ ಅಮೃತಹಳ್ಳಿ ಪೋಲೀಸ್ ಠಾಣೆ |
| 6 | ಕು. ನಂದನ ಸಿ.ಎನ್ | ಸ..ಅ, ಬಿ.ಡಬ್ಲೂ.ಎಸ್.ಎಸ್.ಬಿ (ನಿರ್ವಹಣೆ) |
| 7 | ಶ್ರೀ ನಂಜುಂಡಪ್ಪ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ. 06 (ಥಣಿಸಂದ್ರ) |
| 8 | ಶ್ರೀಮತಿ ಕಾಂತಾಮಣಿ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ. 06 (ಥಣಿಸಂದ್ರ) |
| 9 | ಶ್ರೀ ಸುನಿಲ್ ಬಿ | ಮಾರಶಲ್ ವಾರ್ಡ್ ನಂ 06 |

ಶ್ರೀ ಸುರೇಶ ದೇವತರಾಜ್ ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಮಿತಿಯ ಸಭೆಗೆ ಹಾಜರಾಗಿದ್ದ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಹಾಗೂ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ವಾರ್ಡ್ ಸಮಿತಿಯ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡಾ ವಿಷಯದ ಬಗ್ಗೆ ತಿಳಿಸಿದರು.

1. **ಹಿಂದಿನ ಸಭೆಯಲ್ಲಿ ಚರ್ಚಿಸಿಲಾಗಿರುವ ವಿಷಯಗಳ ಬಗ್ಗೆ:** ಪ್ರಥಮವಾಗಿ ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿರುವ ವಿಷಯಗಳ ಬಗ್ಗೆ ವಿವರವನ್ನು ಸದಸ್ಯ ಕಾರ್ಯದರ್ಶಿಗಳು ಸಭೆಯ ಗಮನಕ್ಕೆ ತಿಳಿಸಿದರು.
2. **ಕೋವಿಡ್ -19_ಸೊಂಕು ಹರಡವುದನ್ನು ತಡೆಗಟ್ಟುವ ಬಗ್ಗೆ :** ಆರೋಗ್ಯ ವೈಧ್ಯಾಧಿಕಾರಿಗಳು, ಹೆಗಡೆನಗರ ಪ್ರಾಥಮಿಕ ಆರೋಗ್ಯ ಕೇಂದ್ರರವರು ಮಾತನಾಡಿ ಕೋವಿಡ್ ಸೊಂಕು ಪ್ರಕರಣಗಳು ಹೆಚ್ಚಾಗುತ್ತಿದ್ದು, ಸಾರ್ವಜನಿಕರು ಸೊಂಕು ಹರಡವುದನ್ನು ತಡೆಗಟ್ಟುವ ಸಲುವಾಗಿ ಮಾಸ್ಕ ಧರಿಸಬೇಕು, ಅಂತರ ಕಾಪಾಡಬೇಕು ಮತ್ತು ಸ್ಯಾನಿಟೈಸ್ ಮಾಡಬೇಕೆಂದು ಸಭೆಗೆ ತಿಳಿಸಿದರು. ಹಿಂದಿನ ಒಂದು ತಿಂಗಳಿನಲ್ಲಿ ವಾರ್ಡ್ ನಂ 06 ರಲ್ಲಿ ಒಟ್ಟು 106 ಕೋವಿಡ್ ಸೊಂಕು ಪ್ರಕರಣಗಳು ದಾಖಲಾಗಿದ್ದು, ಹೋಮ್ ಐಸೋಲೇಷನ್ ನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಹಾಗೂ ದಿನಾಂಕ 02-07-2022 ರಂದು ಒಟ್ಟು 9 ಪ್ರಕರಣಗಳು ದಾಖಲಾಗಿರುತ್ತವೆ ಎಂದು ತಿಳಿಸಿದರು. ಮತ್ತು ಕೋವಿಡ್ ಟೆಸ್ಟಿಂಗ್‌ಗಾಗಿ ಸಾರ್ವಜನಿಕರು ಯಾರು ಮುಂದೆ ಬರುತ್ತಿರುವುದಿಲ್ಲ ಎಂದು ತಿಳಿಸಿದರು.
3. **ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ :** ಸಾರ್ವಜನಿಕರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಖಾಲಿ ನಿವೇಶನಗಳಲ್ಲಿ ಹಾಗೂ ಖಾಲಿ ಜಾಗಗಳಲ್ಲಿ ತ್ಯಾಜ್ಯವನ್ನು ಸುರಿಯುತ್ತಿದ್ದಾರೆ ಎಂದು ತಿಳಿಸಿದರು. ಆದ್ದರಿಂದ ಅಂತಹ ಜಾಗಗಳನ್ನು ಪರೀಶೀಲಿಸಿ ಅಗತ್ಯ ಕ್ರಮವಹಿಸಲು ಕೋರಿದರು. ಕಿರಿಯ ಆರೋಗ್ಯ ಪರಿವೀಕ್ಷಕರು,

ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ ಹೆಚ್ಚಿನ ಗಮನ ಹರಿಸಿ ಸಮರ್ಪಕವಾಗಿ ನಿರ್ವಹಣೆ ಮಾಡುವುದು ಅವಶ್ಯಕವಾಗಿರುತ್ತದೆ ಎಂದು ಸಾರ್ವಜನಿಕರು ತಿಳಿಸಿದರು.

4. **ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಮತ್ತು ಒಳಚರಂಡಿಗೆ ಸಂಬಂದಿಸಿದ ವಿಷಯಗಳ ಬಗ್ಗೆ :**

- **ವಾರ್ಡ್ ಸಹಾಯಕ ಅಭಿಯಂತರರು ಮಾತನಾಡಿ** ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ಕಾವೇರಿ ಕುಡಿಯುವ ನೀರಿನ ಪೈಪ್‌ಲೈನ್‌ಗಳ ಟೆಸ್ಟಿಂಗ್ ಬಾಕಿವಿರುವ ಕಾರಣ ಭರತನಗರ, ಅಂಜನಾದ್ರಿ ಬಡಾವಣೆ, ಪಿ ಅಂಡ್ ಟಿ ಬಡಾವಣೆ, ಭಾಗ್ಯಶ್ರೀ ಬಡಾವಣೆ, ಥಣಿಸಂದ್ರ ಗ್ರಾಮ, ಅಶ್ವಥನಗರದ ರಸ್ತೆಗಳಿಗೆ ಡಾಂಬರೀಕರಣ ಕಾಮಗಾರಿ ಕೈಗೊಳ್ಳಲು ಸಾಧ್ಯವಾಗುತ್ತಿರುವುದಿಲ್ಲ ಎಂದು ತಿಳಿಸಿದರು ಹಾಗೂ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಅಧಿಕಾರಿಗಳು ವಿಶೇಷ ಗಮನ ಹರಿಸಿ ಕೂಡಲೇ ಕಾವೇರಿ ಕುಡಿಯುವ ನೀರಿನ ಪೈಪ್‌ಲೈನ್‌ಗಳ ಟೆಸ್ಟಿಂಗ್ ಕಾರ್ಯವನ್ನು ಪೂರ್ಣಗೊಳಿಸಿ ಮಾಹಿತಿಯನ್ನು ಬಿ.ಬಿ.ಎಂ.ಪಿ ಉಪ ವಿಭಾಗ ಕಛೇರಿಗೆ ನೀಡಬೇಕಾಗಿ ಕೊರಿದರು.
- **ಶ್ರೀ ದಾಸಪ್ಪ ಹೆಗಡೆನಗರರವರು ಮಾತನಾಡಿ** ಹೆಗಡೆನಗರದಲ್ಲಿ ಮೇಲಿಂದ ಮೇಲೆ ಕೆಲವು ಸ್ಥಳಗಳಲ್ಲಿ ಮ್ಯಾನಹೊಲ್ ಓವರ ಫ್ಲೋ ಆಗಿ ರಸ್ತೆ ಮೇಲೆ ನೀರು ಹರಿಯುತ್ತಿರುವದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಈ ಸಂಬಂದ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಅಧಿಕಾರಿಗಳು ಗಮನ ಹರಿಸಿ ಸರಿಪಡಿಸಲು ಕ್ರಮ ವಹಿಸುತ್ತಿರುವುದಿಲ್ಲವೆಂದು ಸಭೆಯಲ್ಲಿ ತಿಳಿಸಿದರು.

5. **ವಾರ್ಡ್ ವ್ಯಾಪ್ತಿಯಲ್ಲಿನ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ: ವಾರ್ಡ್ ವ್ಯಾಪ್ತಿಯಲ್ಲಿನ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ :**
ವಾರ್ಡ್ ಅಭಿಯಂತರರು ಮಾತನಾಡಿ ದಾಸರಹಳ್ಳಿ ಗ್ರಾಮದ ಮಾರುತಿ ಬಡಾವಣೆ ಮತ್ತು ಭುವನೇಶ್ವರಿನಗರದಲ್ಲಿ ಬಹುತೇಕ ಎಲ್ಲಾ ಅಡ್ಡ ರಸ್ತೆಗಳಿಗೆ ಡಾಂಬರೀಕರಣ ಕಾಮಗಾರಿ ಮಾಡಲಾಗಿದೆ ಎಂದು ಸಭೆಗೆ ತಿಳಿಸಿದರು. ಕುವೆಂಪು ಬಡಾವಣೆ ಮತ್ತು ಭರತನಗರದಲ್ಲಿ ವಿವಿಧ ರಸ್ತೆಗಳಲ್ಲಿ ಚರಂಡಿ ನಿರ್ಮಾಣ ಕಾಮಗಾರಿ ಮತ್ತು ರಸ್ತೆ ಅಭಿವೃದ್ಧಿ ಪಡಿಸುವ ಕಾಮಗಾರಿ ಪ್ರಗತಿಯಲ್ಲಿರುತ್ತವೆ ಎಂದು ತಿಳಿಸಿದರು ವಾರ್ಡ್ ವ್ಯಾಪ್ತಿಯಲ್ಲಿ ಅನುಮೊದನೆಯಾಗಿರುವ ಇನ್ನುಳಿದ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಲು ಬಿ.ಡಬ್ಲ್ಯೂ.ಎಸ್.ಎಸ್.ಬಿ. ಅಧಿಕಾರಿಗಳು ವಿಶೇಷ ಗಮನ ಹರಿಸಿ ಕೂಡಲೇ ಕಾವೇರಿ ನೀರಿನ ಪೈಪ್‌ಲೈನ್ ಟೆಸ್ಟಿಂಗ್ ಕಾರ್ಯವನ್ನು ಪೂರ್ಣಗೊಳಿಸಬೇಕಾಗಿ ಕೋರಿದರು.

6. **ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚುವ ಬಗ್ಗೆ**

ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರು ಎಲ್ಲಾ ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚಲು ಸೂಚನೆ ನೀಡಿದ್ದು ಸಾದೀಕ ಬಡಾವಣೆ ಅಡ್ಡ ರಸ್ತೆಗಳಲ್ಲಿ, ಅಬುಬುಕಾರ ಮಸೀದಿಯ ಅಡ್ಡರಸ್ತೆಗಳಲ್ಲಿ ಹಾಗೂ ಎಮ್.ಎಸ್. ರಾಮಯ್ಯ ಬಡಾವಣೆಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯಲ್ಲಿ ಸಹ ರಸ್ತೆ ಗುಂಡಿಗಳನ್ನು ಮುಚ್ಚಲಾಗಿದೆ ಎಂದು ಸ.ಅ ರವರು ತಿಳಿಸಿದರು.

7. **ವಿದ್ಯೂತ್ ದೀಪಗಳ ನಿರ್ವಹಣೆ ಬಗ್ಗೆ**

**ಶ್ರೀ ದಾಸಪ್ಪ ಹೆಗಡೆನಗರ ರವರು ಮಾತನಾಡಿ** ಬಿ.ಬಿ.ಎಂ.ಪಿ ಯಲಹಂಕ ವಲಯದ ವಿದ್ಯೂತ್ ಶಾಖೆ ವತಿಯಿಂದ ಹೆಗಡೆನಗರದಲ್ಲಿ ಹೊಸದಾಗಿ ಎಲ್.ಇ.ಡಿ ಬಲ್ಬಗಳು ಅಳವಡಿಸಲು ಸರ್ವೇ ಮಾಡಲಾಗಿದ್ದು, ಅದರಂತೆ ಹೆಗಡೆನಗರದಲ್ಲಿ ಹೊಸದಾಗಿ ಎಲ್.ಇ.ಡಿ ಬಲ್ಬಗಳು ಕೂಡಲೇ ಅಳವಡಿಸಬೇಕಾಗಿ ಕೋರಿದರು.

8. **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.**

- **ಶ್ರೀ ದಾಸಪ್ಪ ಹೆಗಡೆನಗರ ರವರು ಮಾತನಾಡಿ** ಥಣಿಸಂದ್ರ ಮುಖ್ಯ ರಸ್ತೆಯಲ್ಲಿ ಹೆಗಡೆನಗರದ ಹತ್ತಿರ ಮತ್ತು ಇತರೆ ಜಾಗಗಳಲ್ಲಿ ಚರಂಡಿ ಅಭಿವೃದ್ಧಿ ಕಾಮಗಾರಿಯನ್ನು ವೈಟ್ ಟಾಪಿಂಗ್ ವಿಭಾಗ ಬಿ.ಬಿ.ಎಂ.ಪಿ ವತಿಯಿಂದ ಪೂರ್ಣಗೊಳಿಸಿರುವುದಿಲ್ಲ ಎಂದು ತಿಳಿಸಿಧರು.
- **ಸಾರ್ವಜನಿಕರು ಮಾತನಾಡಿ** ಥಣಿಸಂದ್ರ ಮುಖ್ಯ ರಸ್ತೆಯಲ್ಲಿನ ಥಣಿಸಂದ್ರ ವೃತ್ತದಲ್ಲಿ ಹಾಗೂ ಸಾದೀಕ್ ಬಡಾವಣೆ ಮತ್ತು ಮಾರುತಿ ಸಮಿಲ್ ಹತ್ತಿರ ಟ್ರಾಫೀಕ್ ಜಾಮ್ ಆಗುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರಯಾಗುತ್ತಿರುವ ಕಾರಣ ಟ್ರಾಫೀಕ್ ಪೋಲೀಸ್ ರವರು ಸೂಕ್ತ ಕ್ರಮ

ವಹಿಸಬೇಕಾಗಿ ಕೋರಿದರು. ಶ್ರೀ ಲಿಂಗರಾಜ ಎ.ಎಸ್.ಐ ರವರು ಮಾತನಾಡಿ ತುರ್ತು ಸಂದರ್ಭದಲ್ಲಿ ಸಾರ್ವಜನಿಕರು 112 ನಂಬರ ಡೈಲ್ ಮಾಡಲು ತಿಳಿಸಿದರು.

- **ಶ್ರೀನಿವಾಸರಾವ ಅಮರಜ್ಯೋತಿ ನಗರ ರವರು** ಮಾತನಾಡಿ ಥಣೀಸಂದ್ರ ಮುಖ್ಯ ರಸ್ತೆಯಲ್ಲಿ ಅಶ್ವಥನಗರ ಆಂಜನೇಯ ದೇವಸ್ಥಾನದ ಹತ್ತಿರ ಈ ಹಿಂದೆ ಇದ್ದದೊಡ್ಡದಾದ ಮರ ಒಣಗಿದ್ದರಿಂದ ರಂಬೆಗಳನ್ನು ಕತ್ತರಿಸಲಾಗಿದ್ದು, ಸಾರ್ವಜನಿಕರಿಗಾಗಿ ಕೂಡಲೇ ಒಂದು ಬಸ್ಸು ಸ್ಟಾಪ್ ನಿರ್ಮೀಸುವುದು ಅತೀ ಅವಶ್ಯಕವಾಗಿರುತ್ತದೆ ಎಂದು ತಿಳಿಸಿದರು.

- **ನಾರಾಯಣಪುರ ಕ್ರಾಸ ಹತ್ತಿರ ಹೊಸದಾಗಿ ನಿರ್ಮಿಸಿರುವ** ಮೇಲಸೇತುವ ಕೆಳಗೆ ಸಾರ್ವಜನಿಕರಿಗಾಗಿ ಶೌಚಾಲಯವನ್ನು ನಿರ್ಮಿಸಲು ಉದ್ದೇಶೀಸಿರುವ ಬಗ್ಗೆ ಮೂಲಭೂತ ಸೌಕರ್ಯ ವಿಭಾಗಕ್ಕೆ ಪತ್ರವನ್ನು ಬರೆದು ಶೌಚಾಲಯವನ್ನು ನಿರ್ಮೀಸಲು ಅನುಮತಿ ಕೊರಲಾಗಿದ್ದು, ಸದರಿಯವರು ಇಲ್ಲಿಯವರೆಗೆ ಅನುಮತಿ ನೀಡಿರುವುದಿಲ್ಲವೆಂದು ಸಭೆಗೆ ತಿಳಿಸಿದರು.

ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿಗಳು, ವಾರ್ಡ್ ಸಮಿತಿರವರು ಮಾತನಾಡಿ ಈವರೆಗೂ ಸಭೆಯಲ್ಲಿ ಚರ್ಚಿಸಿರುವ ಎಲ್ಲಾ ವಿಷಯಗಳನ್ನು ಗಂಬೀರವಾಗಿ ಪರೀಗಣಿಸಿ ಎಲ್ಲಾದೂರು ಮತ್ತು ಸಲಹೆ ಮತ್ತು ಸೂಚನೆಗಳನ್ನು ಕಾರ್ಯರೂಪಕ್ಕೆತರಲುಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಅಗತ್ಯಕ್ರಮ ಕೈಗೊಳ್ಳುವಂತೆ ಸೂಚಿಸುತ್ತಾ ಸಭೆಗೆ ಹಾಜರಾಗಿದ್ದಎಲ್ಲಾ ಅಧಿಕಾರಿಗಳಿಗೆ ಹಾಗೂ ವಿವಿಧ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಹಾಜರಾಗಿರುವ ಸಾರ್ವಜನಿಕರಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

02.07.2022
ಕಾರ್ಯದರ್ಶಿ
ಹಾಗೂ ಸಹಾಯಕಅಭಿಯಂತರರು
ವಾರ್ಡ್ ನಂ. 06, (ಥಣಿಸಂದ್ರ)

2/7/2022
ನೋಡಲ್ ಅಧಿಕಾರಿಗಳು
ವಾರ್ಡ್ ಸಮಿತಿ, ವಾರ್ಡ್ ನಂ. 06(ಥಣಿಸಂದ್ರ)
ಹಾಗೂ ಸ.ಕಾ.ಅ ಬ್ಯಾಟರಾಯನಪುರ ಉಪ ವಿಭಾಗ
ಬಿಬಿಎಂಪಿ, ಬೆಂಗಳೂರು

**ಪ್ರತಿಯನ್ನು.**

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿ ಆಯುಕ್ತರು, ಯಲಹಂಕ ವಲಯ ರವರಿಗೆ ಅವಗಾಹನೆಗೆ ಸಲ್ಲಿಸಿದೆ.
3. ಮುಖ್ಯ ಅಭಿಯಂತರರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
4. ಕಂದಾಯ ಅಧಿಕಾರಿಗಳು (ಯಲಹಂಕ) ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗರವರಿಗೆ ಸಲ್ಲಸಿದೆ
6. ಕಛೇರಿಕಡತಕ್ಕೆ.